ದಿನಾಂಕಃ 05.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

3. ಮಾತುಕತೆಯಾದ ಸಮಯದಲ್ಲಿ ದಾವಾ ಸ್ವತ್ತಿಗೆ 9 ಲಕ್ಷ ಬೆಲೆ ಕಟ್ಟಿದ್ದರು. 7 ಲಕ್ಷ 60 ಸಾವಿರ ಮುಂಗಡ ಹಣ ನೀಡಬೇಕೆಂದು ಮಾತುಕತೆಯಾಯಿತು. ಸಾಕ್ಷಿದಾರರಾಗಿ ಲಗಳಿ ಶಿವಪ್ಪರವರು ಹಾಗೂ ಲಗಳಿ ಸದಪ್ಪರವರು ಬರಬೇಕೆಂದು ಮಾತುಕತೆಯಾಯಿತು. ಬೀರಪ್ಪರವರ ಅಣ್ಣತಮ್ಮಂದಿರು, ಹೆಂಡತಿ ಕರಾರಿಗೆ ಸಹಿ ಮಾಡಬೇಕೆಂದು ಮಾತುಕತೆ ಮಾಡಿದ್ದೆವು. ಬೀರಪ್ಪರವರು ಮನೆಯ ಅಡಚನೆಗಾಗಿ ಸಾಲ ಮಾಡಿದ್ದು ಸಾಲ ತೀರಿಸಲು ಹೊಲ ಮಾರುತ್ತೇನೆ ಎಂದು ಹೇಳಿದರು. ಆ ಸಮಯದಲ್ಲಿ ನಾನು ಅವರ ಸಾಲದ ಪತ್ರಗಳನ್ನು ನೋಡಿಲ್ಲ. ಬೀರಪ್ಪರವರು 10 ರಿಂದ 14 ಲಕ್ಷ ಸಾಲವಿದೆ ಎಂದು ಹೇಳಿದರು. ನನಗೆ ಕರಾರುಪತ್ರವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದ ಜಮೀನು ಬೀರಪ್ಪರವರ ಹೆಸರಿನಲ್ಲಿ ಇತ್ತು. ಅದರ ಸರ್ವೇ ನಂ.296 ಆಗಿರುತ್ತದೆ. ಅದರ ವಿಸ್ತೀರ್ಣ 2 ಎಕರೆ 14 ಗುಂಟೆ ಇರುತ್ತದೆ. ಬೀರಪ್ಪರವರಿಗೆ ಬಸಪ್ಪ ಮತ್ತು ಸಿದ್ದಪ್ಪ ಎಂಬ ಇಬ್ಬರು ಸಹೋದರರು ಇದ್ದಾರೆ ಎಂದರೆ ಸರಿ. ಅವರ ನಡುವೆ ಪಾಲು ಆಗಿದ್ದ ಬಗ್ಗೆ ಕಾಗದಪತ್ರಗಳನ್ನು ನಾನು ನೋಡಿಲ್ಲ, ಅವರು ವಿಭಾಗ ಆಗಿರುತ್ತಾರೆ.

4. ದಾವಾ ಜಮೀನಿನ ಉತಾರದಲ್ಲಿ ಆಗ ಇದ್ದ ಸರ್ವೇ ನಂಬರ್ ಬದಲಾವಣೆ ಆಗಿದೆಯೋ ಅಥವಾ ಅದೇ ಸಂಖ್ಯೆ ಇದೆಯೋ ಎಂದರೆ ಸಾಕ್ಷಿ ನಾನು ಆಗ ನೋಡಿದ್ದು, ನಂತರ ನೋಡಿಲ್ಲ ಎನ್ನುತ್ತಾರೆ. ಬೀರಪ್ಪರವರು 4 ಲಕ್ಷ ಸಾಲ ಬೇಕೆಂದು ಬಂದಿದ್ದು, ಆಗ ಅವರಿಗೆ ಮೋಸ ಮಾಡಿ ಕ್ರಯದ ಕರಾರುಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಬೀರಪ್ಪರವರು ಯಾವತ್ತೂ ಸಹ ನನಗೆ ಜಮೀನು ಮಾರಾಟ ಮಾಡುತ್ತೇನೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಬೀರಪ್ಪರವರು ತನ್ನ ಹೆಂಡತಿ ಮತ್ತು ಮಕ್ಕಳು

ಇರುವುದರಿಂದ ಹೊಲ ಮಾರಾಟ ಮಾಡುವ ವಿಚಾರವನ್ನು ಮಾಡಿಲ್ಲ ಎಂದರೆ ಸಾಕ್ಷಿ ಅವರೆಲ್ಲಾ ಕೂಡಿಯೇ ಬಂದು ಮಾರುತ್ತೇನೆ ಎಂದು ಹೇಳಿದ್ದಾರೆ ಎನ್ನುತ್ತಾರೆ. ದಿಃ16.02.2015 ರಲ್ಲಿ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ. ನನ್ನ ಹಾಗೂ ಬೀರಪ್ಪರವರ ನಡುವೆ 2 ಕರಾರುಪತ್ರಗಳು ಆಗಿರುತ್ತವೆ. ಒಂದು ಮೂರು ವರ್ಷದ ಅವಧಿಗೆ ಆಗಿದ್ದು, ಮತ್ತೊಂದು 1 ವರ್ಷದ ಅವಧಿಗೆ ಆಗಿರುತ್ತದೆ. ಒಂದರ ನಂತರ ಮತ್ತೊಂದು ಕರಾರುಪತ್ರವನ್ನು ಯಾವ ಕಾರಣಕ್ಕಾಗಿ ಮಾಡಿಕೊಂಡಿರಿ ಎಂದರೆ ಸಾಕ್ಷಿ ಬೀರಪ್ಪ ಕಬ್ಬು ಜಮೀನಿನಿಂದ ತೆಗೆದ ನಂತರ ಬರೆದುಕೊಡುತ್ತೇನೆ ಎಂದು ಹೇಳಿದರು ಹಾಗೂ ಅಳತೆ ಮಾಡಿ ನಕ್ಷೆ ಮಾಡಿಕೊಡುತ್ತೇನೆ ಎಂದು ಹೇಳಿದರು, ಮಾಡಿಕೊಡಲಿಲ್ಲ ಹಾಗಾಗಿ ಮತ್ತೊಂದು ಕರಾರು ಮಾಡಿಕೊಟ್ಟರು.

5. 2 ನೇ ಕರಾರುಪತ್ರ ಮಾಡಿಕೊಡುವಾಗ ಮೊದಲನೇಯ ಕರಾರುಪತ್ರವನ್ನು ರದ್ದು ಮಾಡಿಕೊಳ್ಳಲಿಲ್ಲ. ಮೊದಲನೇಯ ಕರಾರುಪತ್ರವನ್ನು ರದ್ದು ಮಾಡಿಕೊಳ್ಳಲು ನನಗೇನೂ ತೊಂದರೆ ಇರಲಿಲ್ಲ. ಮೊದಲನೇಯ ಕರಾರುಪತ್ರ ಹಾಗೂ 2 ನೇ ಕರಾರುಪತ್ರ ಮಾಡಿಕೊಳ್ಳುವ ಮದ್ಯೆ 3 ವರ್ಷಗಳ ಅಂತರವಿರುತ್ತದೆ. ಮೊದಲನೇಯ ಕರಾರುಪತ್ರದ ಮೇಲೆ ದಾವೆ ಮಾಡಿದ್ದಿರೀರಾ ಎಂದರೆ ಸಾಕ್ಷಿ ಅವರು ಬರೆದುಕೊಡುತ್ತೇನೆ ಎಂದು ಹೇಳುತ್ತಾ ಇದ್ದರು, ದಾವೆಯನ್ನು ದಾಖಲು ಮಾಡಲಿಲ್ಲ ಎನ್ನುತ್ತಾರೆ. ಮೊದಲನೇಯ ಕರಾರುಪತ್ರಕ್ಕೆ ನಾನು, ಬೀರಪ್ಪ, ಸಾಕ್ಷಿದಾರರಾಗಿ ಲಗಳಿ ಸಿದ್ದಪ್ಪ, ಒಬ್ಬಿ ಕಿಟ್ಟಪ್ಪ, ಘೋಟಡಕಿ ಆನಂದರವರು ಸಹಿ ಮಾಡಿರುತ್ತಾರೆ. ಕಾಗದಪತ್ರವನ್ನು ಬರೆಯಲು ಬೀರಪ್ಪರವರೇ ಮಾಹಿತಿ ಕೊಟ್ಟರು. ಮೊದಲನೇಯ ಕರಾರುಪತ್ರಕ್ಕೂ ಮತ್ತು 2 ನೇ ಕರಾರುಪತ್ರಕ್ಕೂ ಸಾಕ್ಷಿಗಳು ಒಬ್ಬರೇ ಇದ್ದಾರೆ ಎಂದರೆ ಸರಿಯಲ್ಲ. ಮೊದಲನೇಯ ಕರಾರುಪತ್ರವನ್ನು ಬರೆಸಲು ಮದ್ಯಾಹ್ನ 1.30 ಗಂಟೆಯ ನಂತರ ಗೋಕಾಕ್‌ನ ಬಾಂಡ್ ರೈಟರ್ ಕಛೇರಿಗೆ ಹೋದೆವು. ಕರಾರುಪತ್ರದಲ್ಲಿ 9 ಲಕ್ಷ ಬೆಲೆ ಬರೆಸಿದ್ದು, 7 ಲಕ್ಷ 60 ಸಾವಿರ ಹಣ ಮುಂಗಡ ಕೊಟ್ಟಿದ್ದೇನೆ. ಆಗ ನಾನು, ಬೀರಪ್ಪ, ಸಾಕ್ಷಿದಾರರಾಗಿ ಲಗಳಿ ಸಿದ್ದಪ್ಪ ಮತ್ತು ಒಬ್ಬಿ ಕಿಟ್ಟಪ್ಪ ಎಲ್ಲಾ ಇದ್ದೆವು. ಆ

ಹಣವನ್ನು ಆ ದಿವಸ ಬ್ಯಾಂಕ್‌ನಿಂದ ತಂದಿದ್ದೇನೆ. ಬ್ಯಾಂಕ್ ಖಾತಾ ಸ್ಟೇಟ್‌ಮೆಂಟ್‌ನ್ನು ಹಾಜರು ಪಡಿಸಿರುವುದಿಲ್ಲ. ಅದನ್ನು ಹಾಜರು ಪಡಿಸಲು ನನಗೆ ಏನೂ ತೊಂದರೆ ಇಲ್ಲ, ಹಾಜರು ಪಡಿಸುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ